## ಪ್ರಮೇಯ

ಪೊಲೀಸ್ ಇನ್‌ಸ್ಪೆಕ್ಟರ್, ಬಹಳ ಕುಡಿದಿದ್ದ ವ್ಯಕ್ತಿಯನ್ನು ಹಿಡಿದು ನಿಲ್ಲಿಸಿ, 'ಏನಯ್ಯ, ಇಷ್ಟೊಂದು ಕುಡಿದಿರುವೆಯಲ್ಲ?' ಎಂದು ಕೇಳಿದ. ಅದಕ್ಕೆ ಆ ವ್ಯಕ್ತಿ, 'ಇವತ್ತು ಅಂಥ ಪ್ರಮೇಯ ಒದಗಿ ಬಂತು ಬಿಡ್ತು ಸರ್' ಎಂದು ತೊದಲಿದ. 'ಏನಯ್ಯ ಅಂಥ ಪ್ರಮೇಯ?' ಎಂದು ಕೇಳಿದಾಗ, 'ಅದೇ ಸರ್, ಬಾಟಲಿಯ ಮುಚ್ಚಳ ಕೈಗೇ ಸಿಗಲಿಲ್ಲ' ಎಂದ ಆತ ಇನ್‌ಸ್ಪೆಕ್ಟರ್ ಮುಖ ನೋಡಿದ!

**ಶಂಕರೇಗೌಡ ತುಂಬಕೆರೆ**



## ವಿಭಿನ್ನ ಮದುವೆ

ಮದುಮಗ ತಿಮ್ಮನನ್ನು ಸಂದರ್ಶಕರೊಬ್ಬರು, 'ಇದೇನ್ರೀ ತಿಮ್ಮ, ಅಷ್ಟು ದೊಡ್ಡ ಮಂಟಪ ಬಿಟ್ಟು ಊಟದ ಹಾಲ್‌ನ ಮಧ್ಯೆ, ಟೇಬಲ್ ಮೇಲೆ ಮದುವೆ ಆಗುತ್ತಿದ್ದೀರಲ್ಲಾ?' ಎಂದು ಪ್ರಶ್ನೆ ಮಾಡಿದರು.

ಅದಕ್ಕೆ ತಿಮ್ಮ, 'ನನ್ನ ಪ್ರಕಾರ ಮದುವೆಗಳಲ್ಲಿ ಪ್ರಮುಖ ಆಕರ್ಷಣೆ ಎಂದರೆ ಊಟದ ಟೇಬಲ್! ಅತ್ತ ತಾಳಿ ಬಿತ್ತೊ ಇಲ್ವೋ ಯಾರಿಗೂ ಬೇಡ, ಇತ್ತ ಊಟದ ಎಲೆ ಬೀಳುವುದೇ ಮುಖ್ಯವಾಗಿರುತ್ತೆ. ಅದಕ್ಕೆ ಮದುವೆ ಹಾಗೂ ಊಟ ಎರಡೂ ಒಂದೇ ಕಡೆ ಆಗ್ಲಿ ಅಂತ ಈ ಯೋಜನೆ. ಹೇಗಿದೆ?' ಎಂದು ಹುಬ್ಬೇರಿಸುತ್ತಾ ಕೇಳಿದಾಗ ಸಂದರ್ಶಕ ಬೆಪ್ಪಾಗಿ ನಿಂತ!

**ಮಂಜುಳ ಶ್ರೀಧರ ಶಾಸ್ತ್ರೀ**




ಕಲೆ: ಗಣೇಶ ಆಚಾರ್ಯ